**ಸಾಕ್ಷಿಗೆ ದಿನಾಂಕಃ 07.03.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರಃ ಶ್ರೀ. ಎಸ್ ಜಿ ಎಂ ವಕೀಲರಿಂದ ಃ**

ನನ್ನ ತಂದೆ 1974 ರಲ್ಲಿ ತೀರಿಕೊಂಡಿರುತ್ತಾರೆ. ನನಗೆ 1983 ರಲ್ಲಿ ಮದುವೆಯಾಗಿರುತ್ತದೆ. ನನ್ನ ಮದುವೆ ಧಾರೆಯನ್ನು ನನ್ನ ಅಣ್ಣ 5 ನೇ ಪ್ರತಿವಾದಿ ವೆಂಕಟೇಶ್ ಭಟ್ಟ ಹಾಗೂ ಅವರ ಹೆಂಡತಿ ಮಾಡಿಕೊಟ್ಟಿರುತ್ತಾರೆ. ಈ ದಾವೆಯನ್ನು ತಂದ ನಂತರ 5 ನೇ ಪ್ರತಿವಾದಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿಗೆ ಒಟ್ಟು 4 ಜನ ಹೆಣ್ಣು ಮಕ್ಕಳು ಇದ್ದು ಅವರ ಹೆಸರು 1. ಪೂರ್ಣಿಮ, 2. ಚಂದ್ರಿಕ , 3. ಶ್ರೀ ಶುಭ, 4. ಶ್ವೇತಾ. ಸದರಿರವರು ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತು. ಆದರೆ ವಿಳಾಸ ಗೊತ್ತಿರುವುದಿಲ್ಲ. ಸದರಿಯವರನ್ನು ನಾನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಅವರ ವಿಳಾಸ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಪೂರ್ಣಿಮ ಶಿವಮೊಗ್ಗದಲ್ಲಿ ವಾಸವಾಗಿದ್ದು, ಅವರ ಗಂಡನ ಮನೆ ಕೊಪ್ಪ ತಾಲ್ಲೂಕು ಕಮ್ಮರಡಿ ಎಂದರೆ ಸರಿ. 2 ನೇ ಮಗಳು ಚಂದ್ರಿಕ ಶೃಂಗೇರಿ ತಾಲ್ಲೂಕು ಕುಂಚೇಬೈಲು ಹತ್ತಿರ ಹೊಸೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 3 ಮತ್ತು 4 ನೇ ಮಕ್ಕಳಾದ ಶುಭ ಮತ್ತು ಶ್ವೇತಾ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

9 ನೇ ಪ್ರತಿವಾದಿ ದಾವಾ ತಂದ ನಂತರ ಮೃತ ಪಟ್ಟಿರುತ್ತಾರೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ವಿನಂತಿ ಮೇರೆಗೆ ಮುಂದೂಡಲಾಯಿತು)**

**(ದಿನಾಂಕಃ 07.03.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಸಹಿ/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**